**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ 5 ನೇ ಪ್ರತಿವಾದಿ ಪರ ವಕೀಲರವರಿಂದಃ**

ನನಗೆ ದಾವಾ ಅಸ್ತಿಯ ಸರ್ವೆ ನಂಬರು ಗೊತ್ತಿಲ್ಲ. ದಾವಾ ಅಸ್ತಿ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ನನಗೆ ತಂದೆ 25 ವರ್ಷಗಳ ಹಿಂದೆ ಮೃತ ಪಟ್ಟರು. ಅವರು ಮರಣ ಹೊಂದಿದ ನಂತರ ನನ್ನ ತಮ್ಮನಾದ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಯಿತು ಅಂದರೆ ಸರಿ. ಆತನ ಹೆಸರಿಗೆ 2006-07 ರಲ್ಲಿ ಪೋತಿ ವಾರಸು ನೆಲೆಯಿಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಆ ರೀತಿ ಸುಳ್ಳಾಗಿ ಆಗಿರುತ್ತದೆ ಅಂದರೆ ಸರಿಯಲ್ಲ. ಸದರಿ ಮುಟೇಶನ್ ಆದೇಶವನ್ನು 2014 ರ ವರೆಗೆ ನಾನು ಪ್ರಶ್ನಿಸಿರುವುದಿಲ್ಲ ಅಂದರೆ ಆ ವಿಚಾರ ನಮಗೆ ಗೊತ್ತಿರಲಿಲ್ಲ ಗೊತ್ತಾದ ಮೇಲೆ ಪ್ರಶ್ನಿಸಿರುತ್ತೇವೆ. ದಾವಾ ಅಸ್ತಿಯ ಚಾಲ್ತಿ ಪಹಣಿ 5 ನೇ ಪ್ರ 2 ವಾದಿಯ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. ಯಾವ ನೆಲೆಯಲ್ಲಿ 5 ನೇ ಪ್ರತಿವಾದಿಯ ಹೆಸರಿಗೆ ಪಹಣಿ ದಾಖಲಾಯಿತು ಎಂದು ನನಗೆ ಗೊತ್ತಿರುವುದಿಲ್ಲ.

2. 5 ನೇ ಪ್ರತಿವಾದಿ 1 ನೇಪ್ರತಿವಾದಿ ವಿರುದ್ಧ ದಾವಾ ನಂ 274/2013 ರಂತೆ ನಿರ್ದಿಷ್ಟ ಕರಾರು ನೆರವೇದಿಕೆ ದಾವೆಯನ್ನು ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ದಾವೆ ಡಿಕ್ರಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ಅಧಾರದ ಮೇಲೆ 5 ನೇ ಪ್ರತಿವಾದಿ ಅಮಲುಜಾರಿ ಪ್ರಕರಣವನ್ನು EP No. 15/2014 ರಂತೆ ದಾಖಲು ಮಾಡಿರುವರು ಅಂದರೆ ನನಗೆ ಗೊತ್ತಿಲ್ಲ. ಅಮಲು ಜಾರಿ ಪ್ರಕರಣದಲ್ಲಿ ಸ್ಥಳ ತನಿಖೆಗೆ ಹೋದಾಗ ನನಗೆ ಡಿಕ್ರಿ ಆಗಿರುವ ವಿಚಾರ ಗೊತ್ತಾಗಿರುತ್ತದೆ ಅಂದರೆ ಸರಿ. ಆ ರೀತಿ ಗೊತ್ತಾದ ನಂತರ ವಕೀಲರ ಮೂಲಕ ನಾವು ನೊಟೀಸನ್ನು

**ಸಾಕ್ಷಿಯ ಸಹಿ** 07.03.2026

ಕಳುಹಿಸಿದ್ದೇವೆ ಅಂದರೆ ಸರಿ. ವಕೀಲರಿಗೆ ನೊಟೀಸನ್ನು ನೀಡಲು ಮಾಹಿತಿ ಕೊಡುವ ಕಾಲಕ್ಕೆ 5 ನೇ ಪ್ರತಿವಾದಿಯ ಹೆಸರಿಗೆ ಡಿಕ್ರಿ ಆಗಿರುವುದು ಮತ್ತು ಪಿಹಣಿ ದಾಖಲಾಗಿರುವುದು ನಮಗೆ ಗೊತ್ತಿತ್ತು ಅಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ನಾನು ಉದ್ದೇಶಪೂರ್ವಕವಾಗಿ 5 ನೇ ಪ್ರತಿವಾದಿಯನ್ನು ದಾವೆಯಲ್ಲಿ ಸೇರಿಸಿರಲಿಲ್ಲ ಅಂದರೆ ಸರಿಯಲ್ಲ.

3. ಚಂದ್ರಮ್ಮ ಅಂದರೆ ನನ್ನ ಅಕ್ಕ. ಅವರು ಈ ಹಿಂದೆ ನನ್ನ ಹಾಗೂ 1 ನೇ ಪ್ರತಿವಾದಿಯ ವಿರುದ್ಧ ಪಾಲು ವಿಭಾಗ ದಾವೆಯನ್ನು ಸಲ್ಲಿಸಿದ್ದರು ಅಂದರೆ ಸರಿ. ಆ ದಾವೆಯು ವಜಾ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಾನು ಸಾಕ್ಷಿ ಹೇಳಿದ್ದೇನೆ ಅಂದರೆ ಸರಿಯಲ್ಲ. ಆ ಕೇಸಿನಲ್ಲಿ ನಾನು ಪಾಟೀ ಸವಾಲಿನಲ್ಲಿ ಈ ಕೇಸಿನ ದಾವಾ ಅಸ್ತಿಯು ನಮಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲವೆಂದು ಒಪ್ಪಿಕೊಂಡಿರುತ್ತೇನೆ ಅಂದರೆ ಸಾಕ್ಷಿ ಮೌನ ವಹಿಸುವರು. ನನ್ನ ತಮ್ಮನಿಗೆ 27 ವರ್ಷಗಳ ಹಿಂದೆ ಮದುವೆ ಆಗಿದ್ದು ಮಕ್ಕಳು ಇರುವುದಿಲ್ಲ ಅಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026